# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ : 1658
2. ಸದಸ್ಯರ ಹೆಸರು : ಶ್ರೀ ಸಿ.ಎಂ.ಇಬ್ರಾಹಿಂ(ವಿಧಾನ ಸಭೆಯಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ :19.03.2021
4. ಉತ್ತರಿಸುವ ಸಚಿವರು : ಮಾನ್ಯ ಮೂಲಸೌಲಭ್ಯ ಅಭಿವೃದ್ಧಿ, ಹಜ್ ಮತ್ತು ವಕ್ಫ್ ಸಚಿವರು.

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಶಿವಮೊಗ್ಗ ವಿಮಾನ ನಿಲ್ದಾಣ ಕಾಮಗಾರಿಯು ಸದ್ಯ ಯಾವ ಹಂತದಲ್ಲಿದೆ; | ಶಿವಮೊಗ್ಗ ವಿಮಾನ ನಿಲ್ದಾಣದ ಯೋಜನೆಯನ್ನು 2 ಪ್ಯಾಕೇಜ್ ಗಳಲ್ಲಿ ಕೈಗೊಳ್ಳಲಾಗುತ್ತಿದ್ದು, ಫೇಸ್-1ರ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ. ಪ್ರಸ್ತುತ ಪ್ಯಾಕೇಜ್-1ರಡಿ ವಿಮಾನ ನಿಲ್ದಾಣದ ರನ್-ವೇ, ಕಾಂಪೌಂಡ್, ಟಾಕ್ಸಿವೇ, ಐಸೋಲೇಷನ್ ಬೇ ,ಏಪ್ರಾನ್, ಕೂಡು ರಸ್ತೆ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿದೆ ಹಾಗೂ ಗುತ್ತಿಗೆ ಕರಾರಿನಂತೆ ಕಾಮಗಾರಿಯನ್ನು ಡಿಸೆಂಬರ್-2021ರ ವೇಳೆಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ..<br><br>ಪ್ಯಾಕೇಜ್-2ರ ಕಾಮಗಾರಿಯಡಿ terminal buildings, allied buildings/facilities and associated works ಮುಂತಾದ ಕಾಮಗಾರಿಗಳಿಗೆ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. |
| ಆ) | ಇದಕ್ಕಾಗಿ ಮೀಸಲಿರಿಸಿದ ಅನುದಾನ ಎಷ್ಟು; ಬಳಕೆ ಮಾಡಲಾದ ಅನುದಾನ ಎಷ್ಟು; (ಅಂಕಿ- ಅಂಶಗಳ ವಿವರ ಒದಗಿಸುವುದು) | ಶಿವಮೊಗ್ಗ ವಿಮಾನ ನಿಲ್ದಾಣದ ಅಭಿವೃದ್ಧಿಗಾಗಿ ಆರ್ಥಿಕ ಸಾಲು 2021-22ರಲ್ಲಿ ಒದಗಿಸಲಾಗಿರುವ ಅನುದಾನದಲ್ಲಿ ರೂ.200 ಕೋಟಿಗಳ ಅನುದಾನದಲ್ಲಿ ಕಾಯ್ದಿರಿಸಲು ಪ್ರಸ್ತಾಪಿಸಲಾಗಿರುತ್ತದೆ. ಮುಂದುವರೆದು, 2020-21ರಲ್ಲಿನ ಅನುದಾನದಿಂದ ಸದರಿ ವಿಮಾನ ನಿಲ್ದಾಣ ಅಭಿವೃದ್ಧಿಗಾಗಿ ಇವರೆವಿಗೂ ಮೂಲಸೌಲಭ್ಯ ಅಭಿವೃದ್ಧಿ, ಬಂದರುಗಳು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ವತಿಯಿಂದ ರೂ.74.61ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. |
| ಇ) | ಯೋಜನೆಯ ನಿಧಾನಗತಿಗೆ ಕಾರಣವೇನು; ಎಷ್ಟು ಹಂತಗಳಲ್ಲಿ ಸದರಿ ವಿಮಾನ ನಿಲ್ದಾಣ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು; (ಸಂಪೂರ್ಣ ಮಾಹಿತಿ ನೀಡುವುದು) | ಈ ಯೋಜನೆಯಲ್ಲಿ ಮೊದಲಿಗೆ ಎ.ಟಿ.ಆರ್ ವಿಮಾನ ನಿಲ್ದಾಣ ಮಾದರಿಯ ಕಾರ್ಯಚರಣೆಗೆ ಅನುವಾಗಲು ಉದ್ದೇಶಿಸಲಾಗಿದ್ದು, ತದನಂತರ ಏರ್ ಬಸ್-320 ಮಾದರಿಯ ವಿಮಾನಗಳ ಕಾರ್ಯಚರಣೆಗೆ ಉನ್ನತೀಕರಿಸಿ ಅಭಿವೃದ್ಧಿಪಡಿಸಲು ನಿರ್ಣಯಿಸಲಾಗಿದ್ದು, ಅದರಂತೆ ಪರಿಷ್ಕೃತ ಅಂದಾಜು ಮೊತ್ತ ರೂ.384.00 ಕೋಟಿ ಪರಿಷ್ಕೃತಗೊಂಡ ಅಂದಾಜಿಗೆ ಈಗಾಗಲೇ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಪ್ರಸ್ತುತ ಪ್ಯಾಕೇಜ್-1ರ ಕಾಮಗಾರಿಯು ಪ್ರಗತಿಯಲ್ಲಿದ್ದು, ಡಿಸೆಂಬರ್-2021 ವೇಳೆಗೆ ಪೂರ್ಣಗೊಳಿಸಲು |

| | | |
|---|---|---|
| | | ಯೋಜಿಸಲಾಗಿದೆ.<br>ಪ್ಯಾಕೇಜ್-2ರ ಕಾಮಗಾರಿಗೆ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ |
| ಈ) | ಎಷ್ಟು ಕಾಲಮಿತಿಯೊಳಗೆ ವಿಮಾನ ನಿಲ್ದಾಣ ಕಾರ್ಯಾರಂಭ ಮಾಡಲಾಗುವುದು? | ಪ್ಯಾಕೇಜ್-1ರ ಕಾಮಗಾರಿಯನ್ನು ಡಿಸೆಂಬರ್-2021ಕ್ಕೆ ಪೂರ್ಣಗೊಳಿಸಲು ಯೋಜಿಸಲಾಗಿದೆ ಹಾಗೂ ಪ್ಯಾಕೇಜ್02ರ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಈ ಕಾಮಗಾರಿಗೆ 14 ತಿಂಗಳ ಕಾಲಾವಧಿ ನಿಗಧಿಪಡಿಸಲಾಗಿದೆ. |

ಸಂಖ್ಯೆ:ಮೂಅಇ 37 ರಾಅವಿ 2021

(ಆನಂದ್ ಸಿಂಗ್)
ಮೂಲಸೌಲಭ್ಯ ಅಭಿವೃದ್ಧಿ, ಹಜ್ ಮತ್ತು
ವಕ್ಫ್ ಸಚಿವರು